**<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಿವಕುಮಾರ್ ಕೆ. ಇವರು ನಿಯಮ-72 ರ ಮೇರೆಗೆ ಕೋರಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಹೇಳಿಕೆ:</u>**

**<u>ಸೂಚನೆ</u>**

ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಒಳಮೀಸಲಾತಿಯನ್ನು ಅನುಷ್ಠಾನಗೊಳಿಸಿದ್ದು ಹೊಸ ವರ್ಗೀಕರಣದ ಅಡಿಯಲ್ಲಿ ಅರ್ಹ ಉಪಜಾತಿಗಳನ್ನು ಗುರುತಿಸುವ ನೆಪದಲ್ಲಿ ಕಂದಾಯ ಅಧಿಕಾರಿಗಳು ಹಳೆಯ ದಾಖಲೆಗಳು, ವಂಶಾವಳಿ ಹಾಗೂ ಅನಗತ್ಯ ಪುರಾವೆಗಳನ್ನು ಕೇಳುತ್ತಿದ್ದು, ಶೈಕ್ಷಣಿಕ ಪ್ರವೇಶಾತಿ ಹಾಗೂ ವಿದ್ಯಾರ್ಥಿವೇತನಕ್ಕೆ ಸರ್ಕಾರಿ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ನಿಗದಿತ ಸಮಯದೊಳಗೆ ಜಾತಿ ಪ್ರಮಾಣ ಪತ್ರ ಸಿಗದೆ ಸಾವಿರಾರು ಬಡ ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾಗಿದ್ದು, ಮೀಸಲಾತಿ ಸೌಲಭ್ಯದಿಂದ ವಂಚಿತರಾಗುವ ಭೀತಿ ಎದುರಾಗಿರುವ ಕುರಿತು ನಿಯಮ 72ರ ಅಡಿಯಲ್ಲಿ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

**<u>ಹೇಳಿಕೆ:</u>**

ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಒಳಮೀಸಲಾತಿ ಕಲ್ಪಿಸುವ ಸಂಬಂಧ ಸರ್ಕಾರದ ಆದೇಶ ಸಂಖ್ಯೆ: ಸಕಇ 8 ಎಸ್ ಎಲ್ ಪಿ 2024 ರಲ್ಲಿ ದಿನಾಂಕ: 25.08.2025 ರಂದು ಪರಿಶಿಷ್ಟ ಜಾತಿಯಲ್ಲಿರುವ 101 ಜಾತಿಗಳನ್ನು 5 ಪ್ರವರ್ಗಗಳ ಬದಲಾಗಿ ಪ್ರವರ್ಗ- ಎ, ಪ್ರವರ್ಗ-ಬಿ ಮತ್ತು ಪ್ರವರ್ಗ-ಸಿ ಎಂದು 3 ಪ್ರವರ್ಗಗಳಾಗಿ ವರ್ಗೀಕರಿಸಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಶೇ.17% ಮೀಸಲಾತಿಯನ್ನು ಪ್ರವರ್ಗ- ಎ ರಲ್ಲಿನ ಸಮುದಾಯಗಳಿಗೆ ಶೇ.6%, ಪ್ರವರ್ಗ-ಬಿ ರಲ್ಲಿನ ಸಮುದಾಯಗಳಿಗೆ ಶೇ. 6% ಮತ್ತು ಪ್ರವರ್ಗ -ಸಿ ರಲ್ಲಿನ ಸಮುದಾಯಗಳಿಗೆ ಶೇ.5% ರಷ್ಟು ನಿಗದಿಪಡಿಸಿ ಆದೇಶಿಸಲಾಗಿರುತ್ತದೆ.

1. ಅರ್ಜಿದಾರನು ಈ ಹಿಂದೆ ಪಡೆದಿರುವ ಪರಿಶಿಷ್ಟ ಜಾತಿ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ಪರಿಶಿಷ್ಟ ಜಾತಿಯು 98 ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿದ್ದು ಹಾಗೂ ಸದರಿ ಪರಿಶಿಷ್ಟ ಜಾತಿ ಪ್ರಮಾಣ ಪತ್ರದ ವರ್ಗೀಕರಣ ಕೋರಿ ಅರ್ಜಿ ಸಲ್ಲಿಸಲು ಬಯಸಿದ್ದಲ್ಲಿ ಯಾವುದೇ ದಾಖಲಾತಿಗಳನ್ನು ಸಲ್ಲಿಸಲು ಕಡ್ಡಾಯಗೊಳಿಸಿರುವುದಿಲ್ಲ, ಅರ್ಜಿದಾರನು ನಾಡಕಛೇರಿ ಅಥವಾ ಆನ್‌ಲೈನ್ ಮೂಲಕ ಆಧಾರ್ e-KYC ಮುಖಾಂತರ ಅರ್ಜಿ ಸಲ್ಲಿಸಿ ಸೇವೆಯನ್ನು ನೇರವಾಗಿ ಪಡೆಯಬಹುದಾಗಿರುತ್ತದೆ. ಅನುಮೋದಿತ ಪ್ರಮಾಣ ಪತ್ರದ PDF ಪ್ರತಿಯನ್ನು ಅರ್ಜಿದಾರರಿಗೆ ಮೊಬೈಲ್ ಸಂಖ್ಯೆಗೆ sms ಮುಖಾಂತರ ಕಳುಹಿಸಲಾಗುತ್ತದೆ.

ದಿನಾಂಕ: 10.11.2025 ರಿಂದ ಇದುವರೆಗೂ ಒಟ್ಟು 2,09,163 ಅರ್ಜಿಗಳು ಸ್ವೀಕೃತವಾಗಿದ್ದು ಈ ಪೈಕಿ 1,98,787 ಅರ್ಜಿಗಳು ವಿಲೇವಾರಿಗೊಂಡಿದ್ದು ಇನ್ನುಳಿದ 10,376 ಅರ್ಜಿಗಳು ಸಕಾಲ ಅವಧಿಯೊಳಗೆ ಬಾಕಿ ಉಳಿದಿದ್ದು ವಿಲೇವಾರಿಗೆ ಕ್ರಮವಹಿಸಲಾಗುತ್ತಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಿದೆ.

2. ಅರ್ಜಿದಾರನು ಈ ಹಿಂದೆ ಪಡೆದಿರುವ ಪರಿಶಿಷ್ಟ ಜಾತಿ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ಪರಿಶಿಷ್ಟ ಜಾತಿಯು ಆದಿ ದ್ರಾವಿಡ , ಆದಿ ಕರ್ನಾಟಕ ಮತ್ತು ಆದಿ ಆಂಧ್ರ ಈ ಮೂರು ಸಮುದಾಯಗಳಾಗಿದ್ದಲ್ಲಿ ಹಾಗೂ ಸದರಿ ಪರಿಶಿಷ್ಟ ಜಾತಿ ಪ್ರಮಾಣ ಪತ್ರದ ವರ್ಗೀಕರಣ ಕೋರಿ ಅರ್ಜಿ ಸಲ್ಲಿಸಲು ಬಯಸಿದ್ದಲ್ಲಿ,ಅರ್ಜಿದಾರನು ನಾಡಕಛೇರಿ ಅಥವಾ ಆನ್‌ಲೈನ್ ಮೂಲಕ ಆಧಾರ್ e-KYC ಮುಖಾಂತರ ಅರ್ಜಿಯನ್ನು ಸ್ವಯಂ ಘೋಷಣಾ ಪತ್ರದೊಂದಿಗೆ ಅಗತ್ಯವಿರುವ ಪ್ರಮಾಣಿಕೃತ ದಾಖಲೆಗಳಾದ ಪಡಿತರ ಚೀಟಿ/ ಮತದಾರರ ಗುರುತಿನ ಚೀಟಿ / ಆಧಾರ್ ಕಾರ್ಡ್, ಮತ್ತು ಶಾಲಾ ವರ್ಗಾವಣೆ ಪ್ರಮಾಣ ಪತ್ರ ಐಚ್ಛಿಕ ದಾಖಲೆಗಳಾದ ಕುಟುಂಬ ಸದಸ್ಯರ ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಗ್ರಾಮ ಆಡಳಿತಾಧಿಕಾರಿಯಿಂದ ಪಡೆದ ವಂಶವೃಕ್ಷ, ವೇತನ ಸ್ಲಿಪ್ ಅಥವಾ ಆದಾಯ ತೆರಿಗೆ ಪಾವತಿ ಪ್ರತಿಗಳನ್ನು ಸಲ್ಲಿಸಿದ್ದಲ್ಲಿ ಕ್ಷೇತ್ರ ಪರಿಶೀಲನೆ ಒಳಗೊಂಡ ನಂತರ ಸೇವೆಯನ್ನು ಪಡೆಯಬಹುದಾಗಿರುತ್ತದೆ. ಅನುಮೋದಿತ ಪ್ರಮಾಣ ಪತ್ರದ PDF ಪ್ರತಿಯನ್ನು ಅರ್ಜಿದಾರರಿಗೆ ಮೊಬೈಲ್ ಸಂಖ್ಯೆಗೆ sms ಮುಖಾಂತರ ಕಳುಹಿಸಲಾಗುತ್ತದೆ

ದಿನಾಂಕ: 10.11.2025 ರಿಂದ ಇದುವರೆಗೂ ಒಟ್ಟು 4,05,853 ಅರ್ಜಿಗಳು ಸ್ವೀಕೃತವಾಗಿದ್ದು ಈ ಪೈಕಿ 3,41,486 ಅರ್ಜಿಗಳು ವಿಲೇವಾರಿಗೊಂಡಿದ್ದು ಇನ್ನುಳಿದ 64,367 ಅರ್ಜಿಗಳು ಸಕಾಲ ಅವಧಿಯೊಳಗೆ ಬಾಕಿ ಉಳಿದಿದ್ದು ವಿಲೇವಾರಿಗೆ ಕ್ರಮವಹಿಸಲಾಗುತ್ತಿದೆ ಜಿಲ್ಲಾವಾರು ವಿವರಗಳನ್ನು ಅನುಬಂಧ-2 ರಲ್ಲಿ ನೀಡಿದೆ.

1. ಅರ್ಜಿದಾರನು ಈ ಹಿಂದೆ ಪರಿಶಿಷ್ಟ ಜಾತಿ ಪ್ರಮಾಣ ಪತ್ರವನ್ನು ಪಡೆಯದೇ ಹೊಸದಾಗಿ ಪರಿಶಿಷ್ಟ ಜಾತಿ ಪ್ರಮಾಣ ಪತ್ರದ ವರ್ಗೀಕರಣ ಕೋರಿ ಅರ್ಜಿ ಸಲ್ಲಿಸಿದ್ದಲ್ಲಿ, ಅಗತ್ಯವಿರುವ ಪ್ರಮಾಣಿಕೃತ ದಾಖಲೆಗಳಾದ ಪಡಿತರ ಚೀಟಿ/ ಮತದಾರರ ಗುರುತಿನ ಚೀಟಿ / ಆಧಾರ್ ಕಾರ್ಡ್, ಮತ್ತು ಶಾಲಾ ವರ್ಗಾವಣೆ ಪ್ರಮಾಣ ಪತ್ರ ಐಚ್ಛಿಕ ದಾಖಲೆಗಳಾದ ಕುಟುಂಬ ಸದಸ್ಯರ ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಗ್ರಾಮ ಆಡಳಿತಾಧಿಕಾರಿಯಿಂದ ಪಡೆದ ವಂಶವೃಕ್ಷ, ವೇತನ ಸ್ಲಿಪ್ ಅಥವಾ ಆದಾಯ ತೆರಿಗೆ ಪಾವತಿ ಪ್ರತಿಗಳ ನಿಗದಿತ ದಾಖಲಾತಿಗಳೊಂದಿಗೆ ಹಾಗೂ ಸ್ವಯಂ ಘೋಷಿತ ಪ್ರಮಾಣ ಪತ್ರದೊಂದಿಗೆ ಅರ್ಜಿ ಸಲ್ಲಿಸಿದ್ದಲ್ಲಿ, ಕ್ಷೇತ್ರ ಪರಿಶೀಲನೆಗೆ ಒಳಪಟ್ಟು ಪ್ರಮಾಣ ಪತ್ರವನ್ನು ವಿತರಿಸಲಾಗುತ್ತದೆ.

ದಿನಾಂಕ:10.11.2025 ರಿಂದ ಇದುವರೆಗೂ ಒಟ್ಟು ಸಂಖ್ಯೆ 13,69,433 ಅರ್ಜಿಗಳು ಸ್ವೀಕೃತವಾಗಿದ್ದು ಈ ಪೈಕಿ 13,38,810 ಅರ್ಜಿಗಳು ವಿಲೇವಾರಿಗೊಂಡಿದ್ದು ಇನ್ನುಳಿದ 30,623 ಅರ್ಜಿಗಳ ಪೈಕಿ 29,405 ಅರ್ಜಿಗಳು ಸಕಾಲ ಅವಧಿಯೊಳಗೆ ಬಾಕಿ ಉಳಿದಿದ್ದು ಇನ್ನುಳಿದಂತೆ 1,218 ಅರ್ಜಿಗಳು ಸಕಾಲ ಅವಧಿ

ಮೀರಿದ್ದಾಗಿದ್ದು, ವಿಲೇವಾರಿಗೆ ಕ್ರಮವಹಿಸಲಾಗುತ್ತಿದೆ., ಜಿಲ್ಲಾವಾರು ವಿವರಗಳನ್ನು ಅನುಬಂಧ-3 ರಲ್ಲಿ ನೀಡಿದೆ.

ದಿನಾಂಕ:10.11.2025 ರಿಂದ ಇದುವರೆಗೂ ಈ ಮೇಲ್ಕಂಡ ಮೂರು ಅಂಶಗಳನ್ನು ಒಳಗೊಂಡಂತೆ ಒಟ್ಟು 19,84,449 ಅರ್ಜಿಗಳು ರಾಜ್ಯಾದ್ಯಂತ ಸ್ವೀಕೃತವಾಗಿರುತ್ತದೆ. ಈ ಪೈಕಿ ಒಟ್ಟು 18,79,083 ಅರ್ಜಿಗಳು ವಿಲೇವಾರಿಗೊಂಡಿರುತ್ತದೆ. ಇನ್ನುಳಿದ 1,05,366 ಅರ್ಜಿಗಳ ಪೈಕಿ 1,04,148 ಅರ್ಜಿಗಳು ಸಕಾಲ ಕಾಲಾವಧಿಯೊಳಗೆ (21 ದಿನಗಳು) ಬಾಕಿ ಉಳಿದಿದ್ದು, ಇನ್ನುಳಿದಂತೆ 1,218 ಅರ್ಜಿಗಳು ಸಕಾಲ ಅವಧಿ ಮೀರಿದ್ದಾಗಿದ್ದು,ಈ ಪೈಕಿ ಬೆಂಗಳೂರು ನಗರ ಜಿಲ್ಲೆಯಲ್ಲಿ 626 ಅರ್ಜಿಗಳು ಹಾಗೂ ಇನ್ನುಳಿದ ಜಿಲ್ಲೆಗಳಲ್ಲಿ 592 ಅರ್ಜಿಗಳು ಬಾಕಿ ಉಳಿದಿದ್ದು, ಸದರಿ ಬಾಕಿ ಅರ್ಜಿಗಳನ್ನು ಶೀಘ್ರದಲ್ಲಿ ವಿಲೇವಾರಿಗೊಳಿಸಲು ಸಂಬಂಧಿಸಿದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ. ಸದರಿ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-4 ರಲ್ಲಿ ನೀಡಿದೆ.

ಸರ್ಕಾರದ ಸುತ್ತೋಲೆ ಸಂಖ್ಯೆ:ಕಂಇ 44 ಎಜಿಎಸ್ 2018, ದಿನಾಂಕ:10.09.2018ರಲ್ಲಿ ಜಾತಿ ಪ್ರಮಾಣ ಪತ್ರವನ್ನು ಪಡೆಯಲು ದಾಖಲೆಗಳು ಹಾಗೂ ಕಾರ್ಯವಿಧಾನವನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆ:-

**ದಾಖಲೆಗಳು:**

1. ಪಡಿತರ ಚೀಟಿ/ ಮತದಾರರ ಗುರುತಿನ ಚೀಟಿ / ಆಧಾರ್ ಕಾರ್ಡ್,
2. ಶಾಲಾ ವರ್ಗಾವಣೆ ಪ್ರಮಾಣ ಪತ್ರ

**ಐಚ್ಛಿಕ ದಾಖಲೆಗಳು:**

ಕುಟುಂಬದ ಇತರೆ ಸದಸ್ಯರು ಎಂದು ಗುರುತಿಸುವ ಇತ್ತೀಚಿನ,

1. ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಗ್ರಾಮ ಆಡಳಿತಾಧಿಕಾರಿಯಿಂದ ಪಡೆದ ವಂಶವೃಕ್ಷ
2. ವೇತನ ಸ್ಲಿಪ್ ಅಥವಾ ಆದಾಯ ತೆರಿಗೆ ಪಾವತಿ (ಆದಾಯ ದೃಢೀಕರಣ ಪತ್ರಕ್ಕಾಗಿ)

**ಕಾರ್ಯವಿಧಾನ**: ಮೇಲ್ಕಂಡ ಎಲ್ಲಾ ದಾಖಲೆಗಳೊಂದಿಗೆ ಅರ್ಜಿಗಳನ್ನು ಪಡೆದು ಗ್ರಾಮ ಲೆಕ್ಕಿಗರು ಕ್ಷೇತ್ರ ಪರಿಶೀಲನೆ ಮಾಡಿದ ವರದಿಯನ್ನು ಕಂದಾಯ ನಿರೀಕ್ಷಕರಿಂದ ಅನುಮೋದನೆಯಾದ ನಂತರ ಪ್ರಮಾಣ ಪತ್ರ ವಿತರಣೆ.

ಮೇಲಿನಂತೆ, ಜಾತಿ ಪ್ರಮಾಣ ಪತ್ರ ವಿತರಿಸಲು ಕ್ರಮವಹಿಸಲಾಗುತ್ತಿದ್ದು, ರಾಜ್ಯದ ಪರಿಶಿಷ್ಟ ಜಾತಿಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಒಳಮೀಸಲಾತಿಯನ್ನು ಅನುಷ್ಠಾನಗೊಳಿಸಿದ್ದು ಹೊಸ ವರ್ಗೀಕರಣದ ಅಡಿಯಲ್ಲಿ ಅರ್ಹ ಉಪಜಾತಿಗಳನ್ನು ಗುರುತಿಸುವ ನೆಪದಲ್ಲಿ ಕಂದಾಯ ಅಧಿಕಾರಿಗಳು ಹಳೆಯ ದಾಖಲೆಗಳು, ವಂಶಾವಳಿ ಹಾಗೂ ಅನಗತ್ಯ ಪುರಾವೆಗಳನ್ನು ಕೇಳುತ್ತಿರುವುದಿಲ್ಲ.

ಮುಂದುವರೆದು, ಸರ್ಕಾರಿ ಹುದ್ದೆಗಳ ನೇಮಕಾತಿಗಾಗಿ ಕಳೆದ ಮೂರು ತಿಂಗಳುಗಳಲ್ಲಿ ಒಟ್ಟು 39,66,120 (ಜಾತಿ ಮತ್ತು ಆದಾಯ ಪ್ರಮಾಣ ಪತ್ರಕ್ಕೆ ಸಂಬಂಧಿಸಿದಂತೆ) ಅತೀ ಹೆಚ್ಚು ಅರ್ಜಿಗಳು ಸ್ವೀಕೃತವಾಗಿದ್ದು, 2025 ನೇ ಸಾಲಿನ ಮೇ, ಜೂನ್ ಮತ್ತು ಜುಲೈ ಮಾಹೆಯ ತುಲನಾತ್ಮಕ ಅಂಕಿ ಅಂಶಗಳ ಮಾಹಿತಿಯನ್ನು ಅನುಬಂಧ-5 ರಲ್ಲಿ ನೀಡಿದೆ. ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ಎಲ್ಲಾ ಅರ್ಜಿಗಳನ್ನು ಸಕಾಲ ಕಾಲಮಿತಿಯೊಳಗೆ ವಿಲೇವಾರಿಗೊಳಿಸಲು ಕ್ರಮವಹಿಸಲಾಗುತ್ತದೆ.

**ಸಂಖ್ಯೆ:ಕಂಇ 56 ಎಚಿಎಸ್ 2026**

(ಡಾ: ಜಿ.ಪರಮೇಶ್ವರ್)
ಉಪ ಮುಖ್ಯಮಂತ್ರಿ
ಹಾಗೂ ಕಂದಾಯ ಸಚಿವರು

| Annexure - 1 | | | | | | | | | | | | |
|---|---|---|---|---|---|---|---|---|---|---|---|---|
| **Group Update in Existing Certifiacte (98 Caste List) - SC Caste Grouping Applications Transactions Report from 10-Nov-2025 to 11-Aug-2026** | | | | | | | | | | | | |
| Sl No | District | Group A | | | Group B | | | Group C | | | Total Applications Received | Total Disposed |
| | | Applications Received | Approved | Rejected | Applications Received | Approved | Rejected | Applications Received | Approved | Rejected | | |
| 1 | BAGALKOTE | 6536 | 6379 | 2 | 3290 | 3208 | 1 | 6374 | 6109 | 1 | 16200 | 15700 |
| 2 | BALLARI | 274 | 262 | 0 | 642 | 611 | 0 | 1681 | 1567 | 1 | 2597 | 2441 |
| 3 | BELAGAVI | 5657 | 5590 | 0 | 5664 | 5607 | 1 | 3969 | 3912 | 0 | 15290 | 15110 |
| 4 | BENGALURU RURAL | 86 | 64 | 0 | 29 | 26 | 0 | 683 | 469 | 0 | 798 | 559 |
| 5 | BENGALURU SOUTH | 30 | 24 | 0 | 55 | 40 | 0 | 727 | 646 | 1 | 812 | 711 |
| 6 | BENGALURU URBAN | 173 | 138 | 1 | 193 | 146 | 0 | 883 | 618 | 6 | 1249 | 909 |
| 7 | BIDAR | 5010 | 4578 | 0 | 8056 | 7367 | 4 | 3540 | 3198 | 0 | 16606 | 15147 |
| 8 | CHAMARAJANAGARA | 41 | 38 | 0 | 133 | 110 | 1 | 150 | 122 | 0 | 324 | 271 |
| 9 | CHIKKABALLAPURA | 77 | 68 | 3 | 14 | 14 | 0 | 1230 | 1140 | 4 | 1321 | 1229 |
| 10 | CHIKKAMAGALURU | 68 | 62 | 0 | 95 | 91 | 0 | 1724 | 1594 | 0 | 1887 | 1747 |
| 11 | CHITRADURGA | 159 | 151 | 0 | 31 | 31 | 0 | 2327 | 2217 | 0 | 2517 | 2399 |
| 12 | DAKSHINA KANNADA | 91 | 87 | 0 | 606 | 541 | 1 | 225 | 206 | 0 | 922 | 835 |
| 13 | DAVANGERE | 146 | 141 | 0 | 55 | 49 | 0 | 5041 | 4753 | 1 | 5242 | 4944 |
| 14 | DHARWAD | 1870 | 1829 | 0 | 645 | 622 | 0 | 1883 | 1847 | 0 | 4398 | 4298 |
| 15 | GADAG | 1964 | 1914 | 2 | 323 | 308 | 0 | 3027 | 2933 | 5 | 5314 | 5162 |
| 16 | HASSAN | 64 | 61 | 0 | 158 | 144 | 0 | 1608 | 1530 | 0 | 1830 | 1735 |
| 17 | HAVERI | 2207 | 2163 | 5 | 378 | 370 | 0 | 4187 | 4119 | 7 | 6772 | 6664 |
| 18 | KALABURAGI | 4959 | 4798 | 0 | 10203 | 9775 | 0 | 7413 | 7138 | 0 | 22575 | 21711 |
| 19 | KODAGU | 55 | 52 | 0 | 88 | 73 | 0 | 151 | 125 | 0 | 294 | 250 |
| 20 | KOLAR | 26 | 22 | 3 | 136 | 117 | 2 | 1768 | 1494 | 7 | 1930 | 1645 |
| 21 | KOPPAL | 7876 | 7832 | 3 | 1354 | 1345 | 0 | 7524 | 7487 | 1 | 16754 | 16668 |
| 22 | MANDYA | 155 | 131 | 3 | 145 | 123 | 1 | 446 | 270 | 2 | 746 | 530 |
| 23 | MYSURU | 295 | 256 | 2 | 102 | 82 | 0 | 250 | 153 | 0 | 647 | 493 |
| 24 | RAICHUR | 14258 | 14096 | 0 | 3653 | 3615 | 0 | 10251 | 10219 | 0 | 28162 | 27930 |
| 25 | SHIVAMOGGA | 391 | 270 | 0 | 187 | 138 | 0 | 6202 | 4799 | 7 | 6780 | 5214 |
| 26 | TUMAKURU | 81 | 75 | 2 | 35 | 34 | 0 | 1658 | 1609 | 5 | 1774 | 1725 |
| 27 | UDUPI | 61 | 41 | 0 | 170 | 158 | 0 | 98 | 78 | 1 | 329 | 278 |
| 28 | UTTARA KANNADA | 421 | 397 | 5 | 176 | 164 | 0 | 804 | 759 | 2 | 1401 | 1327 |
| 29 | VIJAYANAGARA | 293 | 283 | 0 | 194 | 187 | 0 | 6655 | 6567 | 0 | 7142 | 7037 |
| 30 | VIJAYAPURA | 5862 | 5358 | 0 | 6602 | 6103 | 0 | 10498 | 9391 | 1 | 22962 | 20853 |
| 31 | YADGIR | 3945 | 3870 | 0 | 3910 | 3793 | 0 | 5733 | 5602 | 0 | 13588 | 13265 |
| **Total** | | **63131** | **61030** | **31** | **47322** | **44992** | **11** | **98710** | **92671** | **52** | **209163** | **198787** |

## Annexure - 2

**Group Update in Existing Certifiacte through field verification - SC Caste Grouping Applications Transactions Report from 10-Nov-2025 to 11-Aug-2026**

| Sl No | District | Group A | | | Group B | | | Group C | | | Total Applications Received | Total Disposed |
|---|---|---|---|---|---|---|---|---|---|---|---|---|
| | | Applications Received | Approved | Rejected | Applications Received | Approved | Rejected | Applications Received | Approved | Rejected | | |
| 1 | BAGALKOTE | 3053 | 2724 | 33 | 1497 | 1274 | 29 | 2991 | 2605 | 46 | 7541 | 6711 |
| 2 | BALLARI | 12291 | 10359 | 414 | 1777 | 1357 | 77 | 2314 | 1704 | 155 | 16382 | 14066 |
| 3 | BELAGAVI | 3683 | 3344 | 81 | 3914 | 3535 | 66 | 3232 | 2973 | 59 | 10829 | 10058 |
| 4 | BENGALURU RURAL | 4885 | 4316 | 265 | 2712 | 2419 | 141 | 869 | 727 | 59 | 8466 | 7927 |
| 5 | BENGALURU SOUTH | 2368 | 1812 | 49 | 7506 | 5425 | 126 | 1448 | 1033 | 12 | 11322 | 8457 |
| 6 | BENGALURU URBAN | 1835 | 994 | 228 | 3092 | 1728 | 394 | 537 | 253 | 43 | 5464 | 3640 |
| 7 | BIDAR | 2261 | 1684 | 66 | 3590 | 2698 | 62 | 1510 | 1185 | 32 | 7361 | 5727 |
| 8 | CHAMARAJANAGARA | 3159 | 2692 | 41 | 17030 | 14679 | 137 | 404 | 286 | 2 | 20593 | 17837 |
| 9 | CHIKKABALLAPURA | 11412 | 9952 | 594 | 3302 | 2633 | 276 | 2983 | 2456 | 126 | 17697 | 16037 |
| 10 | CHIKKAMAGALURU | 3832 | 3114 | 262 | 8207 | 6872 | 303 | 3064 | 2404 | 184 | 15103 | 13139 |
| 11 | CHITRADURGA | 17344 | 14216 | 517 | 1277 | 1062 | 23 | 7029 | 5355 | 112 | 25650 | 21285 |
| 12 | DAKSHINA KANNADA | 94 | 81 | 2 | 656 | 560 | 19 | 121 | 105 | 3 | 871 | 770 |
| 13 | DAVANGERE | 8773 | 7045 | 538 | 1007 | 816 | 46 | 6804 | 5451 | 186 | 16584 | 14082 |
| 14 | DHARWAD | 1023 | 947 | 18 | 392 | 370 | 0 | 849 | 716 | 41 | 2264 | 2092 |
| 15 | GADAG | 1722 | 1448 | 139 | 364 | 297 | 29 | 2641 | 2247 | 199 | 4727 | 4359 |
| 16 | HASSAN | 3056 | 2364 | 189 | 16524 | 12173 | 521 | 1645 | 1140 | 94 | 21225 | 16481 |
| 17 | HAVERI | 3396 | 2967 | 158 | 421 | 332 | 24 | 5770 | 4786 | 346 | 9587 | 8613 |
| 18 | KALABURAGI | 2232 | 2015 | 100 | 6168 | 5595 | 184 | 3750 | 3461 | 106 | 12150 | 11461 |
| 19 | KODAGU | 426 | 345 | 16 | 2852 | 2294 | 119 | 139 | 103 | 13 | 3417 | 2890 |
| 20 | KOLAR | 3025 | 2614 | 223 | 13651 | 11690 | 1048 | 2087 | 1771 | 162 | 18763 | 17508 |
| 21 | KOPPAL | 3801 | 3454 | 185 | 686 | 645 | 14 | 3063 | 2836 | 105 | 7550 | 7239 |
| 22 | MANDYA | 6257 | 4681 | 271 | 23765 | 17923 | 735 | 1711 | 1253 | 95 | 31733 | 24958 |
| 23 | MYSURU | 8322 | 6027 | 608 | 34614 | 21955 | 1419 | 1976 | 1114 | 195 | 44912 | 31318 |
| 24 | RAICHUR | 5175 | 4433 | 248 | 1249 | 1101 | 64 | 3555 | 3178 | 123 | 9979 | 9147 |
| 25 | SHIVAMOGGA | 5098 | 3728 | 197 | 2103 | 1482 | 148 | 8989 | 6224 | 370 | 16190 | 12149 |
| 26 | TUMAKURU | 15876 | 13517 | 1141 | 4140 | 3470 | 342 | 6062 | 5293 | 330 | 26078 | 24093 |
| 27 | UDUPI | 186 | 135 | 8 | 610 | 477 | 13 | 64 | 40 | 5 | 860 | 678 |
| 28 | UTTARA KANNADA | 255 | 208 | 23 | 201 | 167 | 26 | 940 | 800 | 62 | 1396 | 1286 |
| 29 | VIJAYANAGARA | 6492 | 5782 | 276 | 477 | 391 | 39 | 4449 | 3897 | 175 | 11418 | 10560 |
| 30 | VIJAYAPURA | 3262 | 2710 | 174 | 3679 | 3042 | 201 | 5502 | 4212 | 214 | 12443 | 10553 |
| 31 | YADGIR | 2533 | 2061 | 146 | 2413 | 1943 | 121 | 2352 | 1977 | 117 | 7298 | 6365 |
| | **Total** | **147127** | **121769** | **7210** | **169876** | **130405** | **6746** | **88850** | **71585** | **3771** | **405853** | **341486** |

| Annexure - 3 | | | | | | | | | | | | |
|---|---|---|---|---|---|---|---|---|---|---|---|---|
| New Applications Request - SC Caste Grouping Applications Transactions Report from 10-Nov-2025 to 11-Aug-2026 | | | | | | | | | | | | |
| Sl No | District | Group A | | | Group B | | | Group C | | | Total Applications Received | Total Disposed |
| | | Applications Received | Approved | Rejected | Applications Received | Approved | Rejected | Applications Received | Approved | Rejected | | |
| 1 | BAGALKOTE | 20928 | 19705 | 1074 | 9779 | 9238 | 501 | 22446 | 20992 | 1292 | 53153 | 52802 |
| 2 | BALLARI | 32538 | 29682 | 2706 | 5394 | 4732 | 578 | 12215 | 10690 | 1376 | 50147 | 49764 |
| 3 | BELAGAVI | 24105 | 22646 | 1253 | 23858 | 22494 | 1032 | 19089 | 17725 | 1219 | 67052 | 66369 |
| 4 | BENGALURU RURAL | 10428 | 8969 | 1419 | 6743 | 5833 | 842 | 3268 | 2617 | 636 | 20439 | 20316 |
| 5 | BENGALURU SOUTH | 4831 | 4287 | 371 | 17174 | 15131 | 1201 | 5833 | 4912 | 554 | 27838 | 26456 |
| 6 | BENGALURU URBAN | 19876 | 12852 | 5337 | 31165 | 20516 | 7602 | 12513 | 7526 | 3533 | 63554 | 57366 |
| 7 | BIDAR | 18146 | 16555 | 970 | 23815 | 22051 | 1037 | 16837 | 15100 | 1188 | 58798 | 56901 |
| 8 | CHAMARAJANAGARA | 7357 | 6899 | 368 | 36741 | 34562 | 1307 | 2116 | 1888 | 183 | 46214 | 45207 |
| 9 | CHIKKABALLAPURA | 27154 | 24705 | 2324 | 7621 | 6656 | 913 | 8593 | 7663 | 878 | 43368 | 43139 |
| 10 | CHIKKAMAGALURU | 7768 | 6458 | 1030 | 17639 | 16417 | 1020 | 10216 | 8307 | 1332 | 35623 | 34564 |
| 11 | CHITRADURGA | 39975 | 36354 | 2461 | 3696 | 3314 | 245 | 21910 | 19131 | 1532 | 65581 | 63037 |
| 12 | DAKSHINA KANNADA | 470 | 402 | 62 | 3858 | 3362 | 392 | 982 | 831 | 141 | 5310 | 5190 |
| 13 | DAVANGERE | 24688 | 21867 | 2430 | 3416 | 3018 | 311 | 26970 | 24298 | 2017 | 55074 | 53941 |
| 14 | DHARWAD | 8004 | 6953 | 929 | 3184 | 2727 | 422 | 6927 | 5907 | 895 | 18115 | 17833 |
| 15 | GADAG | 7407 | 6765 | 587 | 1521 | 1344 | 149 | 14160 | 12773 | 1265 | 23088 | 22883 |
| 16 | HASSAN | 6890 | 5982 | 836 | 31864 | 28720 | 2407 | 6871 | 5968 | 740 | 45625 | 44653 |
| 17 | HAVERI | 11223 | 10137 | 1056 | 1633 | 1445 | 183 | 18900 | 17071 | 1755 | 31756 | 31647 |
| 18 | KALABURAGI | 17245 | 15965 | 1069 | 33557 | 31512 | 1690 | 30452 | 28062 | 2133 | 81254 | 80431 |
| 19 | KODAGU | 1350 | 1097 | 223 | 5782 | 4763 | 843 | 858 | 593 | 218 | 7990 | 7737 |
| 20 | KOLAR | 7944 | 6560 | 1359 | 35928 | 30779 | 4998 | 9956 | 8262 | 1663 | 53828 | 53621 |
| 21 | KOPPAL | 14478 | 13277 | 1172 | 2509 | 2284 | 221 | 13303 | 12346 | 913 | 30290 | 30213 |
| 22 | MANDYA | 9212 | 8375 | 736 | 37307 | 34496 | 2283 | 3664 | 3133 | 485 | 50183 | 49508 |
| 23 | MYSURU | 15412 | 13018 | 1739 | 53643 | 46596 | 4033 | 4177 | 3197 | 757 | 73232 | 69340 |
| 24 | RAICHUR | 29921 | 27559 | 2242 | 7354 | 6665 | 678 | 21706 | 19775 | 1861 | 58981 | 58780 |
| 25 | SHIVAMOGGA | 10407 | 8908 | 1199 | 5207 | 4146 | 850 | 25959 | 21801 | 3287 | 41573 | 40191 |
| 26 | TUMAKURU | 35334 | 31052 | 3740 | 9384 | 7970 | 1300 | 16833 | 15197 | 1462 | 61551 | 60721 |
| 27 | UDUPI | 713 | 503 | 147 | 1924 | 1596 | 192 | 535 | 332 | 159 | 3172 | 2929 |
| 28 | UTTARA KANNADA | 2147 | 1886 | 238 | 1231 | 1046 | 182 | 5406 | 4765 | 567 | 8784 | 8684 |
| 29 | VIJAYANAGARA | 18798 | 17353 | 1409 | 1841 | 1617 | 214 | 24192 | 22402 | 1719 | 44831 | 44714 |
| 30 | VIJAYAPURA | 25321 | 22209 | 2630 | 27333 | 23964 | 2832 | 49891 | 43996 | 4087 | 102545 | 99718 |
| 31 | YADGIR | 13090 | 11988 | 1009 | 10756 | 9917 | 701 | 16638 | 15559 | 981 | 40484 | 40155 |
| | **Total** | **473160** | **420968** | **44125** | **462857** | **408911** | **41159** | **433416** | **382819** | **40828** | **1369433** | **1338810** |

| Annexure-4 | | |
|---|---|---|
| SC Caste Applications Sakala OverDue Pendency as on 12-08-2026 | | |
| Sl No | District | Sakala OverDue |
| 1 | BAGALKOTE | 31 |
| 2 | BALLARI | 6 |
| 3 | BELAGAVI | 26 |
| 4 | BENGALURU RURAL | 8 |
| 5 | BENGALURU SOUTH | 8 |
| 6 | BENGALURU URBAN | 626 |
| 7 | BIDAR | 37 |
| 8 | CHAMARAJANAGARA | 8 |
| 9 | CHIKKABALLAPURA | 13 |
| 10 | CHIKKAMAGALURU | 13 |
| 11 | CHITRADURGA | 25 |
| 12 | DAKSHINA KANNADA | 5 |
| 13 | DAVANGERE | 24 |
| 14 | DHARWAD | 15 |
| 15 | GADAG | 9 |
| 16 | HASSAN | 12 |
| 17 | HAVERI | 9 |
| 18 | KALABURAGI | 53 |
| 19 | KODAGU | 6 |
| 20 | KOLAR | 45 |
| 21 | KOPPAL | 22 |
| 22 | MANDYA | 12 |
| 23 | MYSURU | 26 |
| 24 | RAICHUR | 34 |
| 25 | SHIVAMOGGA | 11 |
| 26 | TUMAKURU | 25 |
| 27 | UDUPI | 1 |
| 28 | UTTARA KANNADA | 3 |
| 29 | VIJAYANAGARA | 36 |
| 30 | VIJAYAPURA | 47 |
| 31 | YADGIR | 22 |
| Total | | 1218 |

Annexure - 5

## Caste and Income Related Transactions Comparison Report

